International Journal of Kannada Research
www.kannadajournal.com

ISSN: 2454–5813
IJKR 2021; 7(4): 90-94
© 2021 IJKR
www.kannadajournal.com
Received: 10-08-2021
Accepted: 12-09-2021

**ಡಾ. ಪುಷ್ಪಭಾರತಿ ಆರ್.ಎ**
ಕನ್ನಡ ಸಹ ಪ್ರಾಧ್ಯಾಪಕರು, ಕನ್ನಡ ಸ್ನಾತಕೋತ್ತರ ಅಧ್ಯಯನ ಕೇಂದ್ರ, ಐ.ಡಿ.ಎಸ್.ಜಿ ಸರ್ಕಾರಿ ಕಾಲೇಜು, ಚಿಕ್ಕಮಗಳೂರು–577102

**Corresponding Author:**
**ಡಾ. ಪುಷ್ಪಭಾರತಿ ಆರ್.ಎ**
ಕನ್ನಡ ಸಹ ಪ್ರಾಧ್ಯಾಪಕರು, ಕನ್ನಡ ಸ್ನಾತಕೋತ್ತರ ಅಧ್ಯಯನ ಕೇಂದ್ರ, ಐ.ಡಿ.ಎಸ್.ಜಿ ಸರ್ಕಾರಿ ಕಾಲೇಜು, ಚಿಕ್ಕಮಗಳೂರು–577102

# ಜನಪದ ಸಾಹಿತ್ಯದಲ್ಲಿ ಸಂಭ್ರಮ–ಸಂಕಟ

**ಡಾ. ಪುಷ್ಪಭಾರತಿ ಆರ್.ಎ**

'ಮಾನವನ ಬದುಕಿನ ಎಲ್ಲ ಆಯಾಮಗಳ ಪ್ರತಿಬಿಂಬವೇ ಜಾನಪದ'. ಅಕ್ಷರಜ್ಞಾನ ಇಲ್ಲದ ಸಂದರ್ಭದಿಂದ ಮೌಖಿಕ ರೂಪದಲ್ಲಿ ಆರಂಭವಾಗಿ, ಅಕ್ಷರಜ್ಞಾನ ದೊರೆಕೊಂಡ ಮೇಲೂ ಮುಂದುವರೆದುಕೊಂಡು ಹೋಗುತ್ತಿರುವ 'ಜಾನಪದ'ದ ಒಳಗೆ ಕಾಣುವ ವಿಭಾಗಗಳು ಹಲವಾರು. ಜನಪದ ಸಾಹಿತ್ಯ, ಜನಪದ ವೈದ್ಯ, ಜನಪದ ಕಲೆ, ಜನಪದ ಉದ್ಯಮ, ಜನಪದ ಅಡುಗೆ, ಜನಪದ ಆಚರಣೆಗಳು ಹೀಗೆ ಬಹು ವಿಸ್ತಾರವಾಗಿ ನಮ್ಮ ಬದುಕಿನ ಪ್ರತಿಯೊಂದು ಅಂಗವನ್ನೂ ಒಳಗೊಂಡಿರುವ ಅಭಿವ್ಯಕ್ತಿ ವಿಧಗಳು ಜಾನಪದದ ಒಳಗೆ ಅಡಕವಾಗಿರುವುದು ನಮಗೆ ಗೊತ್ತಿರುವಂಥದೇ ಆಗಿದೆ. ಅದರಲ್ಲಿ ನಾವು ಇಲ್ಲಿ ಜನಪದ ಸಾಹಿತ್ಯದಲ್ಲಿ ಕಾಣಸಿಗುವ ಸಂಭ್ರಮ ಸಂಕಟಗಳನ್ನು ಅವಲೋಕಿಸೋಣ. ಜನಪದ ಸಾಹಿತ್ಯ ಪ್ರಕಾರದಲ್ಲಿ ಕಾವ್ಯ, ಕಥೆ, ಗಾದೆ ಮತ್ತು ಒಗಟುಗಳು ವಿಭಾಗಗೊಂಡಿವೆ. ಈ ಲೇಖನದ ಮಟ್ಟಿಗೆ. ಕಾವ್ಯ ಮತ್ತು ಕಥಾ ಪ್ರಕಾರವನ್ನು ಕೇಂದ್ರವಾಗಿರಿಸಿಕೊಂಡು ಚರ್ಚಿಸಬಹುದು. ಜನಪದ ಸಾಹಿತ್ಯ ಎಂದರೆ ಮೌಖಿಕ ಪರಂಪರೆಯ ಸಾಹಿತ್ಯ ಎಂದಾಗಿತ್ತು. ಇತ್ತೀಚೆಗೆ ಲಿಖಿತ ಜಾನಪದವೂ ಗುರುತಿಸಲ್ಪಟ್ಟಿದ್ದು ಅದರ ಬಗ್ಗೆಯೂ ಚರ್ಚೆ ನಡೆಯುತ್ತಿದೆ. ಆದರೂ ಲಿಖಿತ ಜಾನಪದ ವಿಭಾಗ ಇನ್ನೂ ಅಧ್ಯಯನಗಳಿಗೆ ತೆರೆದುಕೊಳ್ಳಬೇಕಿದೆ. ಜನಪದ ಸಾಹಿತ್ಯವು ವೈಯಕ್ತಿಕ ನೆಲೆ ಮತ್ತು ಸಾರ್ವತ್ರಿಕ ನೆಲೆಗಳೆರಡರಲ್ಲಿಯೂ ಅಭಿವ್ಯಕ್ತವಾಗಿರುವುದನ್ನ ಗುರುತಿಸಬಹುದು. ನೋವುನಲಿವುಗಳು ಈ ಎರಡು ನೆಲೆಗಳಲ್ಲಿಯೂ ನೋವು ನಲಿವುಗಳ ಅಭಿವ್ಯಕ್ತ ರೂಪಗಳು ದೊಡ್ಡ ಪ್ರಮಾಣದಲ್ಲಿವೆ.

ಸಾಮಾನ್ಯವಾಗಿ ಜನಪದ ಗೀತೆ – ಕಥೆ ಎಂದರೆ ಅದು ಸಂಭ್ರಮದ ಕ್ಷಣಗಳನ್ನು ದಾಖಲು ಮಾಡುವಂಥದ್ದೇ ಅನ್ನುವುದು ಸಾಮಾನ್ಯವಾದ ಗ್ರಹಿಕೆ, ಏಕೆಂದರೆ ಮದುವೆ ಮುಂತಾದ ಶುಭ ಸಂದರ್ಭಗಳು, ದೈವಾಚರಣೆಗಳು, ಮಕ್ಕಳ ಅಂದ ಆನಂದವನ್ನ ಕುರಿತು ಹೇಳುವ ಹಾಡುಗಳು, ಕಷ್ಟದಲ್ಲಿ ಶುರುವಾದರೂ ಸುಖದಲ್ಲಿ ಅಂತ್ಯವಾಗುವ ಕಥೆಗಳು, ಅದ್ಭುತ ರಮ್ಯ ಕಥೆಗಳು, ಮಾಯಾ ಮಂತ್ರಜಾಲದ ಕಥೆಗಳು ಇವು ಪ್ರಚಲಿತದಲ್ಲಿರುವುದರಿಂದ ಜನಪದ ಸಾಹಿತ್ಯ ಸಂಭ್ರಮದ ಸಾಹಿತ್ಯವೆನ್ನಿಸಿರುವುದರಲ್ಲಿ ಆಶ್ಚರ್ಯವಿಲ್ಲ. ಸೋಬಾನದ ಹಾಡುಗಳು ಇಲ್ಲದಿದ್ದರೆ ಮದುವೆ ಆದಂತೆಯೇ ಇಲ್ಲ ಎನ್ನುವ ಕಾಲವೊಂದಿತ್ತು. ಹೆಚ್ಚು ಹಣ ಕೇಳಿದ ವಾಲಗದವರನ್ನು ಬಿಟ್ಟು ಬರಿಯ ಸೋಬಾನೆ ಹಾಡುಗಳಿಂದಲೇ ಸೋಬಾನೆ ಚಿಕ್ಕಮ್ಮನು ಮದುವೆ ನೆರವೇರಿಸಿದ್ದರ ಬಗ್ಗೆ ಹೆಚ್.ಎಲ್.ನಾಗೇಗೌಡರು ತಮ್ಮ 'ಸೋಬಾನೆ ಚಿಕ್ಕಮ್ಮ'ದಲ್ಲಿ ಹೇಳುತ್ತಾರೆ. ಅಂದರೆ ಸೋಬಾನದ ಹಾಡುಗಳು, ಪದಗಳು ಅಷ್ಟರ ಮಟ್ಟಿಗೆ ಮದುವೆ ಸಂಭ್ರಮಕ್ಕೆ ಕಳೆಕಟ್ಟುವಂಥ ಸಾಮರ್ಥ್ಯ ಹೊಂದಿದ್ದವು ಅನ್ನುವುದು ಗೊತ್ತಾಗುತ್ತದೆ. ವರನ ಸಾಮರ್ಥ್ಯವನ್ನ, ವಧುವಿನ ಸೌಂದರ್ಯವನ್ನು ವರ್ಣಿಸುವುದು ಬೀಗರನ್ನ ಹೊಗಳುವುದು, ಕೆಲವು ಬಾರಿ ಛೇಡಿಸುವುದು ಇಂಥವೆಲ್ಲ ಸಂಭ್ರಮದ ಸಂದರ್ಭಕ್ಕೆ ಸಾಕ್ಷಿಯಾಗುತ್ತದೆ.

ನಮ್ಮನೆ ಬೀಗತಿ ನಮ್ಮ ನೋಡುತ ಬಂದ್ಲು
ದಮ್ಮನೆ ಬಿದ್ಲಲ್ಲೊ ದೊಗರಿಗೆ ಸೋಬಾನವೇ–2

ಎಂದು ಹಾಡುವುದು ಬೀಗಿತ್ತಿಯನ್ನು ಛೇಡಿಸುವ ಪರಿಯಾದರೆ ಮಕ್ಕಳ ಅಂದ ಚೆಂದ ಹೇಳುವಲ್ಲಿ ಜನಪದ ಗೀತೆಯನ್ನು ಬಿಟ್ಟಿಲ್ಲ.

ಆಡಿ ಬಾ ನನ ಕಂದ ಅಂಗಾಲ ತೊಳೆದೇನು
ತೆಂಗೀನ ಕಾಯಿ ತಿಳಿನೀರ ತಕ್ಕೊಂಡು

ನಿನ ಭಂಗಾರ ಮೋರೆ ತೊಳೆದೇನು.

ಈ ಪದ, ಮಾತೆ ಮತ್ತು ಮಗುವಿನ ಸಂಬಂಧದ ಬಂಧುರತೆಯನ್ನು ಇಡಿಯಾಗಿ ಹಿಡಿದುಕೊಡುತ್ತದೆ.
ಸ್ತುತಿ ಪದ್ಯದಲ್ಲಿ ದೈವವನ್ನು ಕುರಿತ ಹಾಡು ಸಂತಸವನ್ನು ವ್ಯಕ್ತಪಡಿಸುತ್ತದೆ.

ಸರಸತಿ ಎಂಬೋಳೆ ವರುಷದಿಂದೋದೀದೆ
ಅರಿಸಿನದ ಸೀರೆ ನೆರಿಯೋಳೆ ! ಸರಸೋತಿ
ಹರುಷದಲಿ ನಿನ್ನ ನೆನೆವೇನು

**ಎನ್ನುತ್ತ ಸಂತಸವನ್ನು ವ್ಯಕ್ತ ಮಾಡುತ್ತದೆ.**
ಜನಪದ ಕಲೆ ಮತ್ತು ಸಾಹಿತ್ಯ ಎರಡನ್ನೂ ಮೇಳೈಸಿಕೊಂಡದ್ದು ಎಂದರೆ ಕೋಲಾಟದ ಪದಗಳು. ಇವು ಮನರಂಜನಾಗೀತೆಗಳೂ ಆಗಿದ್ದು ದೇವರ ಉತ್ಸವದ, ಹಬ್ಬಹರಿದಿನಗಳ ಸಂದರ್ಭದಲ್ಲಿ ಕೋಲು ಹಾಕುತ್ತ, ಅದರ ತಾಳಕ್ಕೆ ತಕ್ಕಂತೆ ರಾಗ ಬದಲಿಸುತ್ತ ನೋಡುವವರಿಗೂ, ಕೇಳುವವರಿಗೂ ಆನಂದ ನೀಡುವಂಥ ಪದಗಳಾಗಿವೆ, ಅಂಥದ್ದೊಂದು ಪದ

ಕೈತಾರೆ ಕೈತಾರೆ ಕೈತಾರೆ ದುಂಬಿ
ಕೈನೋಡಿ ನಾನೊಂದ ಹೇಳುವೆನು ದುಂಬಿ

ಅನ್ನುವ ಹಾಡು ಬಹಳ ಸೊಗಸಾದ ಹಾಡು. ಇದೊಂದು 'ಹೂವು–ದುಂಬಿ'ಗಳ ಆಟದ ಸ್ವರೂಪದ್ಲಲಿರುವ ಗೀತೆ. ಹದಿನಾರು, ಹದಿನೆಂಟು, ಇಪ್ಪತ್ತು–ಜನ ವೃತ್ತಾಕಾರದಲ್ಲಿ ನಿಂತು ಕೋಲು ಹಾಕುತ್ತಾರೆ ವಿವಿಧ ವಿನ್ಯಾಸದಲ್ಲಿ. ಅವರ ನಡುವೆ ಹೂವು ಪಾತ್ರಧಾರಿ ಒಬ್ಬ ಕೋಲು ಹಾಕುತ್ತಾ, ಹಾಡು ಹೇಳುತ್ತಾ, ನುಸುಳುತ್ತಾ ಓಡಾಡುತ್ತಾರೆ. ಹೂವು–ದುಂಬಿಯನ್ನು ಓಡಿಸಿಕೊಂಡು ಹೋಗುತ್ತೆ ಇಲ್ಲಿ, ದುಂಬಿ– ಹೂವಿನ ಕೈಗೆ ಸಿಗದಂತೆ ತಪ್ಪಿಸಿಕೊಳ್ಳುತ್ತೆ. ಹೂವು ಪ್ರಶ್ನೆ ಕೇಳುತ್ತಾ ಹೋಗುತ್ತದೆ, ದುಂಬಿ ಉತ್ತರ ಹೇಳುತ್ತಾ ಹೋಗುತ್ತದೆ. ಹೂವಿನ ಪ್ರಶ್ನೆಗೆ ದುಂಬಿ ಉತ್ತರ ಹೇಳುವವರೆಗೂ ದುಂಬಿಗೆ ದಾರಿ ಕೊಡುತ್ತಾರೆ. ದುಂಬಿಗೆ ಯಾವಾಗ ಹೂವಿನ ಪ್ರಶ್ನೆಗೆ ಉತ್ತರ ಕೊಡಲು ಆಗುವುದಿಲ್ಲ, ಆಗ ಕೋಲು ಹಾಕುವವರು ದುಂಬಿಗೆ ದಾರಿಕಟ್ಟು ಹಾಕುತ್ತಾರೆ. ಹೂವು ಒಂದು ದುಂಬಿಯನ್ನು ಹಿಡಿದುಬಿಡುತ್ತದೆ. ಅಲ್ಲಿಗೆ ಆ ಕೋಲಾಟ ಮುಕ್ತಾಯ ಇಲ್ಲಿ ಪ್ರಶ್ನೆ ಕೇಳುವ ಬುದ್ಧಿವಂತಿಕೆ, ಉತ್ತರದ ಚಮತ್ಕಾರ, ಆಟದ ಸಾಮರ್ಥ್ಯ, ಓಟದ ಚುರುಕು ಎಲ್ಲ ಇದೆ.
ಇಂಥವು ಈಗ ಕಾಣಸಿಗುವುದೇ ಇಲ್ಲ. ಈ ರೀತಿಯ ಚಮತ್ಕಾರದ ಹಾಡುಗಳಿಗೆ ಜನಪದರಲ್ಲಿ ಬರ ಇಲ್ಲ. ಈ ಹಾಡು ನೋಡಿ ಹೇಗಿದೆ!

ತುಮಕೂರಿಂದ ಬತ್ತ ಬಂದದೆ ಇಳ್ಕು ಬಾರಲೇ ಸಿದ್ದಿ ಇಳ್ಕು ಬಾರಲೇ
ಇಳ್ಕಲಾರೆ ದಮ್ಮಯ್ಯ ಚಳಿಜ್ವರ ಬಂದೈತೆ
ಇಳ್ಕಿ ಗಿಳ್ಕಿ ಇಟ್ಟೀದೀವಿ ಕುಟ್ಟು ಬಾರಲೇ ಸಿದ್ದಿ ಕುಟ್ಟು ಬಾರಲೇ
ಕುಟ್ಟಲಾರೆ ದಮ್ಮಯ್ಯ ಚಳಿಜ್ವರ ಬಂದೈತೆ
ಕುಟ್ಟಿ ಗಿಟ್ಟಿ ಇಟ್ಟೀದೀನಿ ಕೇರು ಬಾರಲೇ ಸಿದ್ದಿ ಕೇರು ಬಾರಲೇ
ಕೇರಲಾರೆ ದಮ್ಮಯ್ಯ ಚಳಿಜರ ಬಂದಯ್ತೆ
ಬೇಸಿಗೀಸಿ ಇಟ್ಟೀದೀನಿ ತಿನ್ನು ಬಾರಲೇ ಸಿದ್ದಿ ತಿನ್ನು ಬಾರೆಲೆ
ತಿಂತೀನಿ ದಮ್ಮಯ್ಯ ಚಳಿಜರ ಬಿಟ್ಹೋದೋ

ಹೀಗೆ ಬದುಕಿನ ವ್ಯತ್ಯಯಗಳನ್ನೂ ತಮಾಷೆಯಲ್ಲಿ ತೋರಿಸುವ ಜನಪದ ಗೀತೆಗಳು – ಕಥೆಗಳು ನಮ್ಮ ಜನಪದರ ಜೀವನದ ಅನುಭವವನ್ನು ಹೇಳುತ್ತ ಸಂಭ್ರಮಿಸುತ್ತವೆ ಕಾವ್ಯಗಳಾಗಿ ಹರಿಯುತ್ತವೆ. ಕಥೆಗಳಾಗಿ ಆವರಿಸಿಕೊಳ್ಳುತ್ತವೆ. ಜನಪದ ಜನಸಾಮಾನ್ಯನ ಹೃದಯದ ಬಿಂಬ ಆದ್ದರಿಂದಲೇ ಅವರ ಆಸೆಗಳು ಹಾಡುಗಳಾಗುತ್ತವೆ, ಕನಸುಗಳು ಕಥೆಗಳಾಗುತ್ತದೆ.
ಅದರ ರೂಪವೇ ಬಡಹುಡುಗನೊಬ್ಬ ರಾಜಕುಮಾರಿಯನ್ನು ವಿವಾಹ ಆಗುವ ಕಥೆ ಆಗುತ್ತದೆ. ಅದಕ್ಕಾಗಿ ಅವನಿಗೆ ಹಾರುವ ಕುದುರೆ ಸಿಗುತ್ತದೆ. ಅವನು ಏಳೇಳು ಸಮುದ್ರ ದಾಟುತ್ತಾನೆ. ಗಾಜಿನ ಬೆಟ್ಟ ಹತ್ತುತ್ತಾನೆ. ಮೈಕೈಯಲ್ಲಿ ಶಕ್ತಿ ಇರದಿದ್ದ ಆ ಹುಡುಗನಿಗೆ ಮಾಂತ್ರಿಕ ಶಕ್ತಿ ಸಿಕ್ಕಿ ಬಿಡುತ್ತದೆ. ಅವರ ಮೂಲಕ ಅವನು ತನ್ನೆಲ್ಲ ಕನಸುಗಳನ್ನ ನನಸು ಮಾಡಿಕೊಂಡು ರಾಜಕುಮಾರನಾಗಿ ರಾಜಕುಮಾರಿ ಜೊತೆ ಮದುವೆಯಾಗಿ ನೂರಾರು ವರ್ಷ ಸುಖವಾಗಿದ್ದುಬಿಡುತ್ತಾನೆ.
'ಹೂಕೊಟ್ಟ ಚದುರೆ'ಯಂತಹ ಅತಿಮಾನುಷ ಪತ್ನಿಯ ಕಥೆ, 'ಮಳೆರಾಯ'ನಂಥ ಅತಿಮಾನುಷ ಪತಿಯ ಕಥೆ, 'ದುಷ್ಟತಾಯಿ' ಯಂಥ ಅತಿಮಾನುಷವಿರೋಧಿಗಳ ಕಥೆ 'ತಾವರೆ ಹೂ'ನಂಥ 'ದೊಂಬರ ಹುಡುಗ'ನ ಅದ್ಭುತ ರಮ್ಯ ಕಥೆಗಳು, ಅಳ್ಳಣ್ಣ, ಬುಳ್ಳಣ್ಣ, ಸುಳ್ಳಣ್ಣ– ನಂಥ ಹಾಸ್ಯ ಕಥೆಗಳು. 'ಹುಲಿಯನ್ನು ಹೆದರಿಸಿದ ಕತ್ತೆ' ಯಂಥ ಪ್ರಾಣಿಕಥೆ, 'ಹೆಂಡತಿಗೆ ಹೇಳಿದ ಗುಟ್ಟ್' ನಂತಹ ಬುದ್ಧಿವಂತಿಕೆ ಕಥೆ;. ಇಂಥವುಗಳೆಲ್ಲ ಅಸಾಧ್ಯವಾದುದನ್ನ ಸಾಧ್ಯವಾಗಿಸಿದುದರ ಸಾಧನೆಯ ಆಶಯವಾಗಿ ಹೊಮ್ಮಿವೆ, ಕಥಾ ರೂಪದಲ್ಲಿ. ಹೀಗೆ ಜನಪದ ಸಾಹಿತ್ಯ ಸಂಭ್ರಮ – ಸಂತೋಷ– ವಿಭ್ರಮಗಳನ್ನ ದಾಖಲಿಸುತ್ತಾ ಹೋಗಿರುವುದನ್ನ ದೊಡ್ಡ ಪ್ರಮಾಣದಲ್ಲಿಯೇ ನೋಡಬಹುದು.
ಆದರೆ ಇದಷ್ಟೇ ಜನಪದ ಸಾಹಿತ್ಯದ ಎಲ್ಲವೂ, ಎಲ್ಲ ಮುಖವೂ ಅಲ್ಲ. ಅದಕ್ಕೆ ಸಂಕಟದ ಮುಖವೂ ಇದೆ. ಇದನ್ನೂ ನಾವು ಗಂಭೀರವಾಗಿ ಅರಿತುಕೊಳ್ಳುವ, ಅಧ್ಯಯನ ಮಾಡಬೇಕಾದ ಅಗತ್ಯ ಇದೆ.
ಜನಪದ ಸಾಹಿತ್ಯ ಅಥವಾ ಜಾನಪದ– ಉದ್ದೇಶ ಪೂರ್ವಕವಾಗಿ ಸೃಷ್ಟಿಸಬೇಕು ಎಂದು ಹುಟ್ಟಿದ್ದಲ್ಲ. ಜನಪದ ಪ್ರಕಾರಗಳು ಒಂದೊಂದರ ಹುಟ್ಟಿಗೂ ಒಂದೊಂದು ಹಿನ್ನೆಲೆ ಇರುತ್ತದೆ. ಜನಪದ ವೈದ್ಯ ಅನುಭವದ ಮೂಲಕ, ಜನಪದ ಕಲೆಗಳು ಅಗತ್ಯದ ಮೂಲಕ, ಜನಪದ ಸಾಹಿತ್ಯ ಶ್ರಮದ ಸಂದರ್ಭವನ್ನು ಹಾಯುವ ಮೂಲಕ–ಹೀಗೆ ಪ್ರತಿಯೊಂದು ಪ್ರಕಾರವೂ ಬದುಕಿನ ತಳಹದಿಯ ಮೇಲೆ ಕಟ್ಟಿಕೊಂಡು ಬಂದಿರುವಂಥವು. ಆದ್ದರಿಂದಲೇ ಅವು ಮೌಖಿಕ ಪರಂಪರೆಯಿಂದ ಅಕ್ಷರ ಪರಂಪರೆಗೆ ಬಾಳಿ ಬಂದವು, ಬೇರುಗಳಾಗಿ ಉಳಿದವು ಅನ್ನುವುದನ್ನ ನಾವು ಮರೆಯುವಂತಿಲ್ಲ.
ಜನಪದ ಸಾಹಿತ್ಯದಲ್ಲಿ ಗೀತೆಗಳು, ಪದಗಳು, ಹಾಡುಗಳು ಇವೆ. ಅವುಗಳಲ್ಲಿ ಎಷ್ಟೋ ಶ್ರಮಮೂಲ ಸಂದರ್ಭದವಾಗಿವೆ, ಹೊಲ, ಗದ್ದೆಗಳಲ್ಲಿ ಉಳುಮೆ, ನಾಟಿ ಕೊಯಿಲು, ಕಣ ಮುಂತಾದುವನ್ನು ಮಾಡುತ್ತಿರುವಾಗ, ರಾಗಿ ಬೀಸುವಾಗ, ಭತ್ತ ಕಟ್ಟುವಾಗ ಹೀಗೆ ದುಡಿಮೆಯಲ್ಲಿ ತೊಡಗಿರುವ ಜನರ ದಣಿವನ್ನ ಮರೆಸುವ ವಿಧಾನ ಮತ್ತು ಪ್ರಯತ್ನಗಳಾಗಿ ಹಾಡುಗಳು ಕಥೆಗಳು ಹುಟ್ಟಿಕೊಂಡವು. ಇಲ್ಲಿ ಸಂಭ್ರಮವೂ ಇದೆ, ಹಾಗೆಯೇ ಸಂಕಟವೂ ಇದೆ.
'ಮಳೆ ಹಾಡು' ಇದೆಯಲ್ಲ, ಅದನ್ನೇ ನೋಡುವುದಾದರೆ ಕೃಷಿಕನಿಗೆ ಮಳೆ ಜೀವಾಮೃತ. ಕೃಷಿಗಾಗಿ ಭೂಮಿಯನ್ನ ಉತ್ತಿದ್ದಾನೆ, ಬಿತ್ತಿದ್ದಾನೆ. ಆದರೆ 'ಬಿತ್ತ' ಮೊಳಕೆ ಒಡೆಯುವ ಕಾಲಕ್ಕೆ ಮಳೆ ಕೈಕೊಟ್ಟಿದೆ. ಬೆಳೆ ಇಲ್ಲದೆ ಶ್ರೀಮಂತರು ಕೂಡ ತತ್ತರಿಸಿ ಹೋಗಿದ್ದಾರೆ.

ಬಣ್ಣಾದ ಗುಬ್ಬ್ಯಾರು ಮಳಿರಾಜಾ
ಅವರು ಮಣ್ಣಾಗಿ ಹೋದಾರು ಮಳಿರಾಜಾ

ಮಕ್ಕಳಿಗೆ ಊಟವಿಲ್ಲದೆ ಸಾಯುತ್ತಿವೆ, ಭಿಕ್ಷೆ ಬೇಡಿದರೂ ಅನ್ನ ಸಿಗುತ್ತಿಲ್ಲ. ದಾರಿದಾರಿಯಲ್ಲಿ ಜನ ಸತ್ತು ಬೀಳುತ್ತಿದ್ದಾರೆ. ಅಷ್ಟರ ಮಟ್ಟಿಗೆ ಭೀಕರ ಬರಗಾಲ ಬಂದು ಎಲ್ಲೆಲ್ಲಿಯೂ ಸಂಕಟವೋ ಸಂಕಟ. ಕೊನೆಗೆ ಮಳೆ ಬಂತು ! ಯಾವಾಗ?– ಕವಿ ಎಷ್ಟು ನೋವಿನಿಂದ ವ್ಯಂಗ್ಯವಾಗಿ ಹೇಳುತ್ತಾನೆ.

ಸ್ವಾತಿಯ ಮಳಿ ಬಂದು ಮಳೆರಾಜಾ
ಸುತ್ತ ದೇಶಕೆ ಆಗ್ಯಾದ ಮಳಿರಾಜಾ
ಹಳ್ಳ ಕೊಳ್ಳ ಹೆಣ ಹರಿದಾಡಿ ಹೋದಾವು
ಯಾವಾಗ ಬಂದೆಪ್ಪಾ ಮಳಿರಾಜಾ!!

ಎಲೆ ಉದುರಿ ಬಿದ್ದಂತೆ ಸತ್ತು ಬೀಳುತ್ತಿರುವ ಜನರನ್ನು ಮಣ್ಣು ಮಾಡಲೂ ಜನ ಬದುಕಿಲ್ಲ. ಆಗ ಬಂತಂತೆ ಮಳೆ! ಆದೂ ಹೇಗೆ? ಹಳ್ಳ–ಕೊಳ್ಳಗಳಲ್ಲಿ ಕೊಚ್ಚಿ ಹರಿದು ಬಿದ್ದಿದ್ದ ಹೆಣಗಳನ್ನು ತನ್ನೊಂದಿದೆ ಒಯ್ಯುವಂಥ ರಭಸದಲ್ಲಿ! ಬರಬೇಕಾದ ಸಮಯದಲ್ಲಿ ಬಂದು ಜೀವ ಚೈತನ್ಯ ನೀಡಬೇಕಾದ ಮಳೆ ಬಾರದೇ ಇದ್ದು, ಬಂದಿದ್ದು ಯಾವಾಗೆಂದರೆ ಎಲ್ಲರೂ ಜೀವ ಕಳೆದುಕೊಂಡ ಮೇಲೆ, ಅಂಥ ಮಳೆ ಬಂದಾದರೂ ಏನು ಪ್ರಯೋಜನ?!
ಅದನ್ನು ಕಂಡ ಕರುಳು ಹೃದಯಗಳು ಎಂಥ ವಿದ್ರಾವಕ ಸ್ಥಿತಿಗೆ ತಲುಪಿರಬೇಡ! ಅದಕ್ಕೇ ಕವಿ ಹೇಳುವುದು

ಯಾವಾಗ ಬಂದೆಪ್ಪಾ ಮಳಿರಾಜ!

ಇಲ್ಲಿರುವ ನೋವು, ವ್ಯಂಗ್ಯ, ಅಸಹಾಯಕತೆ, ಭೀಭತ್ಸತೆ ಅನನ್ಯವಾದುದು.
ರಾಗಿ ಬೀಸುವ ಪದಗಳು ಜನಪದ ಗೀತೆಗಳಲ್ಲಿ ಅತಿಜನಪ್ರಿಯ ಅವುಗಳಲ್ಲಿ ಮಹಿಳೆಯರ ದುಃಖ ಹಾಡಾಗಿ ಹರಿದಿರುವುದು ಅಭಿವ್ಯಕ್ತವಾಗಿದೆ. ಹಾಡು ನೋಡೋಣ, ಇಲ್ಲಿ ತಂಗಿ ತವರುಮನೆಗೆ ಬಂದಿದ್ದಾಳೆ. ತವರಲ್ಲಿ ತಂದೆ – ತಾಯಿ ಇಲ್ಲ. ಅಣ್ಣಯ್ಯ ಕರೆದ ಎಂದು ತಂಗ್ಯಮ್ಮ ಬಂದಿದ್ದಾಳೆ. ಹಾಗೆ ಬಂದ ನಾದಿನಿಗೆ ಅವಳ ಅತ್ತಿಗೆ ಬೀಸಲು ರಾಗಿ ಕೊಟ್ಟಿದ್ದಾಳೆ. ತಂಗ್ಯಮ್ಮನಿಗೆ ದುಃಖ ಪರಿಪರಿಯಾಗಿ ಕಾಡುತ್ತಿದೆ. ಹಾಗೆಂದು ರಾಗಿ ಬೀಸದೆ ಕುಳಿತುಕೊಂಡಿಲ್ಲ ಅವಳು. ರಾಗಿ ಬೀಸುತ್ತಿದ್ದಾಳೆ, ಜೊತೆಗೆ ಪದವನ್ನೂ ಹಾಡುತ್ತಿದ್ದಾಳೆ. ಅದರಲ್ಲೇ ತನ್ನ ನೋವನ್ನೂ ಹೊರಹಾಕುತ್ತಿದ್ದಾಳೆ.

ತಾಯಿ ಇಲ್ಲದ ಮೇಲೆ ತೌರೀಗೆ ಬರಕಾದು
ನಾ ಬಂದು ಕೆಟ್ಟೆನಲ್ಲ ಬಂದು ಕೆಟ್ಟೆನು
ಅಣ್ಣ ಕರೆದಾ ಅಂತ ತೌರ ಮನೀಗೆ ಬಂದೆ
ಅತ್ತಿಗೆ ಕೊಟ್ಟಳಲ್ಲ ಕೊಳಗ ರಾಗಿಯ ನನಗೆ
ನಾ ರಾಗ ಎಳೆದು ಬೀಸತೀನಿ ನಾ ಬೀಸತೀನಿ

ಹೀಗೆ ಶ್ರಮದ ಸಂದರ್ಭದಲ್ಲಿ ಹುಟ್ಟಿದ ಹಾಡುಗಳ ದೊಡ್ಡ ಗಣಿಯೇ ಇದೆ.
'ಬಿತ್ತನೆಹಾಡು' ಹೊಲದ ಬಿತ್ತನೆ ಸಂದರ್ಭದಲ್ಲಿ ಹುಟ್ಟಿರಬಹುದಾದ್ದು. ಇದರಲ್ಲಿ ಹೊಲ ಬಿತ್ತನೆ ಮಾಡುತ್ತಿದ್ದ ಸಂಪೂರ್ಣ ಚಿತ್ರಣ ಸಿಗುತ್ತದೆ. ಬಿತ್ತನೆ ಸಲಕರಣೆಗಳು ಮತ್ತು ಮಾಹಿತಿ ತುಂಬಿರುವ ಈ ಹಾಡು ಆಗ್ಗೆ ಹೊಸಬರಿಗೆ ಬಿತ್ತನೆ ಕೆಲಸ ಕಲಿಸುವಾಗಿನ ಕೈಪಿಡಿಯಂತಿದೆ.

ಆದ್ರಿ ಪುನರಸಿ ಅರವೆಯ ಮಳೆಗಾಲ
ನಾದಿನಿರೆಲ್ಲ ನವಲು ಪವಲು । ಬಣ್ಣವನುಟ್ಟು
ಬೀಜದ ಹೆಡಿಗೆ ಹೊರ ಬನ್ನಿ.

ಆರಿದ್ರ, ಪುನರ್ವಸು ನಕ್ಷತ್ರಗಳ ಕಾಲ ಮಳೆನಕ್ಷತ್ರಗಳದ್ದು. ಆ ಸಮಯಾವಧಿ ಮುಂಗಾರಿನ ಕಾಲ, ಬಿತ್ತನೆಗೆ ಹೇಳಿ ಮಾಡಿಸಿದಂಥದ್ದು. ಆಗ ಬಿತ್ತನೆ ಮಾಡಬೇಕು. ಹೆಡಿಗೆಯಲ್ಲಿ ಅಂದರೆ ಮಂಕರಿಯಲ್ಲಿ ಬಿತ್ತನೆ ಬೀಜ ಹೊತ್ತು ಬನ್ನಿ – ಎಂಬ ಕರೆಯೊಂದಿಗೆ ಆರಂಭ ಆಗುವ ಈ ಹಾಡು ಕೂರಿಗೆ, ಮಿಣಿ, ಸಾಲು, ಹಲುಬೆ, ಆರಂಬ, ಆರು, ಹರಗೋಲು ಮುಂತಾದ ಕೃಷಿ ಪರಿಭಾಷೆಯನ್ನು ಹೊಂದಿದ್ದು ಕೃಷಿ ಪರಿಕರಗಳ ಬಳಕೆಯ ಕುರಿತು ಹೇಳುತ್ತದೆ. ಇವುಗಳನ್ನೆಲ್ಲ ಬಳಸಿ ಉತ್ತು, ಬಿತ್ತು, ಬೆಳೆ ಬೆಳೆದು, ಕೊಯ್ದು, ರಾಶಿ ಮಾಡಿ, ಕಣ ಮಾಡಿ ಧಾನ್ಯವನ್ನು ಮನೆಗೆ ಒಯ್ಯುವ ಸಂಭ್ರಮವನ್ನು ದಾಖಲಿಸುತ್ತದೆ. ಜೊತೆಗೆ

ರಾಸಿ ತುಂಬುವಾಗ ರಾಗ ಪಾಡುವನ್ಯಾರೋ
ಕೃಷಿಯ ಕಷ್ಟ ಕಡುಕಷ್ಟ । ಮಾಸಿವನೆ
ಕಷ್ಟ ನುಂಗೋ ಸಗುತೀಯ ಕೊಡು ನಮಗೆ

ಎಂದು ನುಡಿಯುತ್ತ, ಕೃಷಿಯ ಕಷ್ಟವನ್ನು ಯಾರೆದುರೂ ಹೇಳದೆ ಹಾಡುತ್ತ ಅದನ್ನು ಮರೆಯುವ ರೈತನನ್ನು ನಮ್ಮೆದುರು ನಿಲ್ಲಿಸುತ್ತದೆ. ದೇವರಿಗೆ ರೈತ ಕೇಳುತ್ತಾನೆ. 'ತನಗೆ ಕಷ್ಟ ನುಂಗುವ ಶಕ್ತಿ ಕೊಡು' ಎಂದು! ಯಾರಲ್ಲಿಯೂ ಕಷ್ಟ ಹೇಳಿಕೊಳ್ಳಲು ಸಿದ್ಧವಿರದ 'ರೈತ' ಸಂಕಟ ನುಂಗುವುದು ಹೀಗೆ.
'ಉತ್ತರದೇವಿಯ ಹಾಡು' ಒಂದು ಮಾನವೀಯ ಕಾವ್ಯ ಅಲ್ಲಿರುವ ಸಂಕಟ ಗ್ರಹಿಸಲು ಒಂದು ಮಾನವೀಯ ಪ್ರಜ್ಞೆ ಸಾಕು, ಹೆಚ್ಚೇನೂ ಬೇಡ. ಅಲ್ಲಿ ಸೊಸೆ ತನಗೆ ಎದುರಾಡಿದಳೆಂದು ಅತ್ತೆ ತನ್ನ ಮಗನಿಗೆ ಏನು ಹೇಳುತ್ತಾಳೆ ನೋಡಿ–

ಉತ್ತು ಬಂದ ಮಗನಿಗೆ ತುಪ್ಪ ಅನ್ನ ಇಕ್ಕ್ಯವಳೆ
ಉತ್ತರ ದೇವೆಂಬ ಸೊಸಿಬ್ಯಾಡ– ಕಂದಯ್ಯ
ಬಿಟ್ಟು ಬಿಡವಳ ತವರೀಗೆ
ಮಗನಿಗೆ ಅದು ಸರಿ ಕಾಣುವುದಿಲ್ಲ.
ಬಿಟ್ಟು ಬಿಡಲಿಕ್ಕೆ ಎತ್ತಲ್ಲ ಎಮ್ಮಲ್ಲ
ಹತ್ತುವರ ಮುಟ್ಟಿ ತೆರಮುಟ್ಟಿ ಬಂದವಳ
ಬಿಟ್ಟಿರುನಾರೆ ಹಡೆದವ್ವ – ಎನ್ನುತ್ತಾನೆ.

ತನ್ನ ಹೆಂಡತಿ ಉತ್ತರದೇವಿಯನ್ನ ಬಿಟ್ಟು ಇರಲಾರೆ ಎಂದು ಸೂಕ್ಷ್ಮವಾಗಿ ಹೇಳಿದರೂ, ಬಿಡುವುದಿಲ್ಲ ಎನ್ನುವ ಅವನು ಕೊಡುವ ಕಾರಣ ತೆರದ ಹಣದ್ದು. ಆದರೆ ಅತ್ತೆ ಹಿಡಿದ ಹಟ ಬಿಡಲಿಲ್ಲ, ಸೊಸೆಯನ್ನ ಮನೆಯಿಂದ ಆಚೆ ಹೊರಡಿಸಿಯೇ ಬಿಡುತ್ತಾಳೆ.

ಹೋಗಿ ಬಾರೆ ಹೋಗಿ ಬಾರೆ ಹೊನ್ನೋಲೆ ಕಿನಿಯೋಳೆ
ಮಳ್ಳ ಮಗುಚಿ ಮನೆಗೆ ಬರಬ್ಯಾಡ
ಎಂದು ಎಚ್ಚರಿಕೆ ನೀಡಿಯೂ ಬಿಟ್ಟಳು
ಇನ್ನು ಉತ್ತರದೇವಿಗೆ ಬೇರೆ ದಾರಿ ಕಾಣುತ್ತಿಲ್ಲ.
ಒಂದಾನೆತ್ತಿಕೊಂಡು
ಕಂದಾನ ಕೈಲಿ ಹಿಡ್ಕಂಡು

ಮುಂದಲ ಚಿಕ್ಕಿ ಬೆಳಕಲ್ಲಿ
ಉತ್ತರದೇವಿ ಕುಂದೂರಿಗಾಗಿ ನಡೆದಾಳು

ಇಬ್ಬರು ಮೊಮ್ಮಕ್ಕಳನ್ನು ಕೊಟ್ಟ ಸೊಸೆಯನ್ನು ಆ ಅತ್ತೆ ಮನುಷ್ಯತ್ವ ಇಲ್ಲದೆ ಮನೆಯಿಂದ ಹೊರಗೆ ಹಾಕಿಬಿಟ್ಟಳು. ಉತ್ತರದೇವಿಯ ಮಕ್ಕಳ ಸ್ಥಿತಿ ನೋಡಿ ಮರುಗದವರಿಲ್ಲ. ಅತ್ತ ತವರುಮನೆಗೆ ಹೋದ ಉತ್ತರದೇವಿಗೆ ಅಲ್ಲಿಯೂ ಆಶ್ರಯ ಸಿಗಲಿಲ್ಲ. ತಾಯಿ ಹೇಳುತ್ತಾಳೆ.

ಹಿಂದಾಲ ಕಾಲದಲ್ಲಿ ನನಗೂ ಈಸಾಗಿತ್ತು
ನಿಮ್ಮಪ್ಪಾ ನನ್ನ ಉರಿಸಿದಾರು – ಉತ್ತರದೇವಿ
ನನ್ನ ಸಾಗು ನಿನಗೇ ಒದಗೀತು
ಹೋಗವ್ವ ಹಂಪೆ ಹೊಳೆಗಾಗಿ

ಹೀಗೆ ತವರಿಂದಲೂ ತಿರಸ್ಕರಿಸಲ್ಪಟ್ಟ ಉತ್ತರದೇವಿ ತನ್ನ ಮಕ್ಕಳ ಕಣ್ಣು ಕಟ್ಟಿ, ಹೊಳೆಯೊಳಗೆ ಮುಳುಗಿ ಜೀವ ನೀಗುತ್ತಾಳೆ ಮಕ್ಕಳೊಂದಿಗೆ.

ಮಕ್ಕಳಾ ಕಂಕಳಲ್ಲಿ ಎತ್ತಿಕೊಂಡು
ಒಂದೊಂದು ಮೆಟ್ಟಿಲು ಇಳಿದಾಳು – ಅವರನ್ನ
ಗಂಗಮ್ಮ ತಾಯಿ ಒಳ್ಕಂಡರು.

ಇಂಥ ಸಂಕಟ ಯಾರಿಗೂ ಬರಬಾರದು ಅನಿಸುತ್ತದೆ ಉತ್ತರದೇವಿಯ ಕಥನ ಕೇಳಿ. ಆದರೆ ಈಗಲೂ ಇಂಥ ಉತ್ತರದೇವಿಯರು ನಮ್ಮ ಸಮಾಜದಲ್ಲಿ ಇದೇ ಸಂಕಟಕ್ಕೆ ಗುರಿಯಾಗುವುದು ತಪ್ಪಿಲ್ಲ. ಈಗಲೂ ಕಷ್ಟಗಳಿಗೆ ಉತ್ತರ ಕೊಡಲಾಗದ, ಸಂಸಾರ ಸಂಕಟ ತಡೆಯಲಾರದ ಎಷ್ಟೋ ತಾಯಂದಿರು ತಾವು ಹೆತ್ತ ಮಕ್ಕಳನ್ನು ಕೊಂದು ತಾವೂ ಸಾವಿಗೆ ಶರಣಾಗುವ ಪರಿಪಾಠ ಮುಂದುವರೆದಿದ್ದು ದುರಂತ.
'ಉತ್ತರದೇವಿ' ಹಾಡಿನ ಕೆಲವು ಪಾಠಾಂತರಗಳಲ್ಲಿ 'ತವರಿಗೆ ಹೋಗು' ಅಂದ ಅತ್ತೆಗೆ ಸೊಸೆ ಉತ್ತರದೇವಿ ತನ್ನ ಅಪ್ಪ ತನಗೆ ಬಳುವಳಿ ಕೊಟ್ಟಿದ್ದ ತಪ್ಪಲೆ ಚೊಂಬು, ದೀಪಾಲೆ ಕಂಭ, ಎಮ್ಮೆ, ಹಸು, ಆಡು ಕುರಿಗಳನ್ನು ತನಗೆ ವಾಪಸ್ ಕೊಡಲು ಕೇಳುವ ಬಂಡಾಯದ ದನಿಗಳಿವೆ.
ಏನೇ ಆದರೂ ಇಲ್ಲಿರುವ ಸಂಕಟವಂತೂ ವಿವರಿಸಿದಷ್ಟೂ ನಮ್ಮನ್ನು ಆವರಿಸಿಕೊಳ್ಳುತ್ತದೆ. ಹೀಗೆ ನೀರೊಳಗೆ ಕಳೆದು ಹೋದ ಬದುಕುಗಳ ಎಷ್ಟೋ ಇವೆ. ಕಟ್ಟಿದ ಕೆರೆಗೆ ಬಲಿಯಾಗಿ, 'ಕೆರೆಗೆ ಹಾರ' ದಂಥ ಕಥೆಗಳಿಗೆ ವಸ್ತುವಾದ ಬಾಗೀರಥಿಗಳು ಸಂಕಟಕ್ಕೆ ದನಿಯಾಗಿದ್ದಾರೆ. ಅದನ್ನು ನಾಡೋಜ ಬರಗೂರು ರಾಮಚಂದ್ರಪ್ಪ ಅವರ 'ಬಾಗೀರತಿ' ಚಿತ್ರ ದೃಶ್ಯಕಾವ್ಯವಾಗಿಸಿದೆ.
ಹಾಗೆ ನೋಡಿದರೆ ಸಂಕಟದ ಒಳಗೂ ಸಿಡಿದೆದ್ದು ಬಂಡಾಯ ತೋರಿದವಳೆಂದರೆ ಮಲೆ ಮಾದೇಶ್ವರ ಕಾವ್ಯದ ಸಂಕಮ್ಮ. ಅಲ್ಲಿ ಗಂಡ ನೀಲೇಗೌಡ ಜೇನು ಬೇಟೆಗೆ ಹೊರಟಿದ್ದಾನೆ. ತಾನಿಲ್ಲದಾಗ ಪತ್ನಿ ಸಂಕಮ್ಮ ಬೇರೆ ಯಾರ ಜೊತೆಗಾದರೂ ಹೋಗಿಬಿಡಬಹುದು ಎಂಬ ಅನುಮಾನ ಅವನಿಗೆ. ಅದಕ್ಕೆ ಹೆಂಡತಿಯನ್ನು ಹಾಗೆ ಮಾಡುವುದಿಲ್ಲವೆಂದು ಬಲಗೈ ಭಾಷೆ ಕೊಡು ಎನ್ನುತ್ತಾನೆ. ಅದಕ್ಕವಳು ಒಪ್ಪುವುದಿಲ್ಲ. ಬೇಕಾದರೆ ತನ್ನನ್ನು ತವರಿಗೆ ಬಿಟ್ಟು ನೀನು ಕೊಟ್ಟ ತೆರವನ್ನು ವಾಪಸ್ ತೆಗೆದುಕೋ ಎನ್ನುವ ಮೂಲಕ ಗಂಡನ ಮಾತನ್ನು, ಅವನ ಅನುಮಾನದ ನಡೆಯನ್ನು ವಿರೋಧಿಸುತ್ತಾಳೆ. ಆದರೆ ಆನಂತರ ನೀಲೇಗೌಡ ಅವಳನ್ನು ಹಲವಾರು ಮಂಡಲ, ಉಗ್ರ ಪ್ರಾಣಿ, ಮಾಯ ಮಂತ್ರಗಳಿಂದ ಬಂಧಿಸಿಟ್ಟು ಹೋಗುತ್ತಾನೆ. ಅವಳ ಬಿಡುಗಡೆಗೆ ದೈವವೇ ಬರಬೇಕಾಗುತ್ತದೆ. ಹೀಗೆ ಸಂಕಷ್ಟದೊಳಗಿನ ಬಂಡಾಯವನ್ನೂ ದಾಖಲಿಸಿರುವ ಸಂಕಮ್ಮನ ಕವಟ್ಲು ಅಧ್ಯಯನದ ಹಲವು ದಾರಿಗಳನ್ನು ತೆರೆಯುತ್ತದೆ.
ಸಂಕಟಗಳಲ್ಲೂ ಬೇರೆ ಬೇರೆ ಥರದವನ್ನ ನಮ್ಮ ಜನಪದ ಸಾಹಿತ್ಯ ಹಿಡಿದುಕೊಟ್ಟಿದೆ.
ಇಲ್ಲೊಬ್ಬ ಹೆಣ್ಣುಮಗಳ ಸಂಕಟ ತಾನು 'ಎಂಥ ಹುಡುಗನ್ನ ಮದುವೆ ಮಾಡಿಕೊಳ್ಳಬೇಕು' ಎಂದಾಗಿದೆ! ಚಿಂತಿಸುವ ಸಂಕಟ, ಇದೊಂದು ವಿಶಿಷ್ಟವಾದ ಹಾಡು. ಅದರ ಹೆಸರೇ ಚೆಲುವಾದ್ದು 'ಹುಡುಗನ ಒಲ್ಲೆ' ಎಂದು!
ಅಂದರೆ ಹುಡುಗ ಬೇಡವೇ ಬೇಡ ಎಂದಲ್ಲ. ಅಂತ ಹುಡುಗನ ಒಲ್ಲೆ ಇಂತ ಹುಡುಗನ ಒಲ್ಲೆ ಅನ್ನುತ್ತಾಳೆ ಹುಡುಗಿ. ಇಲ್ಲಿರುವುದು ಪ್ರಣಯದ ಕಾವಿನ ಚಿತ್ರಣ ಅಲ್ಲ, ಬದಲಿಗೆ ಜಾತ್ಯತೀತತೆಯ ಸ್ಪಷ್ಟ ಜಾಣ ನೋಟ.

ಹಾರಾರ ಹುಡುಗನ ಒಲ್ಲೆ ಕಾಣಕ
ನೀರು ಬೇಕವನ ಜಳಕಕ್ಕೆ

ಬ್ರಾಹ್ಮಣರ ಹುಡುಗ ಬೇಡವಂತೆ ಅವಳಿಗೆ, ಅದಕ್ಕೆ ಕಾರಣ ಕೂಡ ಹೇಳುತ್ತಾಳೆ, ಸ್ನಾನ ಸ್ನಾನ ಎಂದು ಯಾವಾಗಲೂ ನೀರು ಕೇಳುತ್ತಾನೆ, ಎಷ್ಟಂತ ನೀರು ಹೊರಲಿ?! ಯಾವಾಗಿನಿಂದ ನೀರಿನ ಸಮಸ್ಯೆ ಎದುರಿಸುವುದು ಹೆಣ್ಣು ಮಗಳೇ ! ಅದಕ್ಕೆ ನೀರು ಸ್ತ್ರೀಲಿಂಗ– ಗಂಗೆ! ಹಾಗೆ ಅವಳ ಪಟ್ಟಿಯಲ್ಲಿ ಬರುವ ಇತರ ಹುಡುಗರನ್ನ ನೋಡಿ,

ಒಕ್ಕಲಿಗ ಹುಡುಗ ಬೇಡ–
ಹೊಟ್ಟೇಗೆ ಅವನಿಗೆ ಏಳೆಂಟು ರೊಟ್ಟಿ ಬೇಕು,
ಕುರುಬರ ಹುಡುಗ ಬೇಡ
ಅಡವಿಯ ಜಾಲಿ ಕೊರಡು ತಲೆಗಿಂಬು ಅವನೀಗೆ
ಬೇಡರ ಹುಡುಗ ಬೇಡ
ಬೇಟೆ ಆಡುತಾ ಇರುತ್ತಾನೆ.
ಅಗಸರ ಹುಡುಗ– ಅವನೂ ಬೇಡ
ಮೈಲಿಗೆ ಬಟ್ಟೆ ಗಂಟು ಯಾವಾಗಲೂ ಬೆನ್ನ ಮೇಲೆ.

ಇದು ಹೀಗೆ ಮುಂದುವರೆಯುತ್ತೆ, ಕವಿಯ ಜಾಣ್ಮೆ ನೋಡಿ 'ಇಂಥ ಜಾತಿಯ ಹುಡುಗ ಬೇಕು' ಎಂದು ಹೇಳಿ ಯಾವುದನ್ನೂ ಎತ್ತಿ ಹಿಡಿಯುವುದಿಲ್ಲ, ಬದಲಿಗೆ 'ಜಾತಿಗಳು ಶ್ರಮ ಮೂಲವಾದವು' ಅನ್ನುವುದನ್ನ ತೋರಿಸುವ ಉದ್ದೇಶ ಇಲ್ಲಿದೆ. ಇಲ್ಲಿ ವೈವಾಹಿಕ ಸಂಬಂಧಕ್ಕೆ ಜಾತಿ ಅಡ್ಡಿ ಬಾರದೆ ಇರುವುದನ್ನು ಗಮನಿಸಬಹುದು. ಯಾವ ಜಾತಿಯವನನ್ನಾದರೂ ಮದುವೆ ಆಗಬಹುದು ಜಾತಿ ನಿರ್ಧಾರವಾಗುವುದು ಅವರು ಮಾಡುತ್ತಿರುವ ಶ್ರಮ ಯಾವುದು ಅನ್ನುವ ಕಾರಣಕ್ಕೆ ಮಾತ್ರ ಎನ್ನುವ ಸೂಚನೆಯನ್ನ ಈ ಗೀತೆ ನೀಡುತ್ತದೆ. ಜೊತೆಗೆ ಹೆಣ್ಣು ಮಗಳಿಗೆ ತನಗೆ ಇಷ್ಟ ಆದವನನ್ನು, ಅನುಕೂಲ ಅನ್ನಿಸಿದವನನ್ನು ವಿವಾಹವಾಗುವ ಅವಕಾಶ, ಸ್ವಾತಂತ್ರ್ಯ ಇತ್ತು ಎಂದು ಕೂಡ ತಿಳಿಸುತ್ತದೆ. ಅಂತರ್ ಜಾತೀಯ ವಿವಾಹಗಳಿಗೆ ಮರ್ಯಾದಾಹತ್ಯೆಯಂತಹ ಕ್ರೂರ ಶಿಕ್ಷೆ ನೀಡುವ ಇಂದಿನ ಸಮಾಜಕ್ಕೆ ನಮ್ಮ ಜನಪದರ ಈ ಹಾಡು ಒಳ್ಳೆಯ ನೀತಿಪಾಠ ಆಗಿದೆ.
ಹೀಗೆ ಉತ್ತಮ ಸಮಾಜ ರೂಪಿಸಲು ಬೇಕಾದ ಎಲ್ಲ ಪರಿಕರಗಳೂ ಜನಪದ ಸಾಹಿತ್ಯದಲ್ಲಿ ಸಿಗುವುದನ್ನು ಯುವ ಓದುಗರು, ಅಧ್ಯಯನಕಾರರು, ಬರಹಗಾರರು, ಸಂಶೋಧಕರು

ಗುರುತಿಸಬೇಕಿದೆ. ನಮ್ಮ ಕನ್ನಡ ಜನಪದ ಸಾಹಿತ್ಯ ಸಂಭ್ರಮ ಸಂಕಟಗಳ ಮೂಸೆಯಲ್ಲಿ ಅದ್ದಿಕೊಂಡು ಎದ್ದು ಬಂದದ್ದು. ಇವುಗಳನ್ನು ವಿಶ್ಲೇಷಣೆಗೆ ಒಳಪಡಿಸುವಾಗ ಈ ಸೂಕ್ಷ್ಮಗಳನ್ನು ಅರಿತುಕೊಂಡು ಅವುಗಳ ಅರ್ಥವನ್ನು ಗ್ರಹಿಸಬೇಕಿದೆ.

ಜಾನಪದ ಬೇರು ; ಅಕ್ಷರ ಸಾಹಿತ್ಯ ಬಿಳಲು
ಬೇರಿನ ಬಲವಿಲ್ಲದೆ ಬಿಳಲು ಬೆಳೆಯದು

ಈ ಪ್ರಜ್ಞೆಯೊಂದಿಗೆ ನಮ್ಮ ಯುವ ತಲೆಮಾರು ಸಾಹಿತ್ಯವನ್ನು ಗ್ರಹಿಸಲಿ ಎನ್ನುವ ಆಶಯ ನನ್ನದಾಗಿದೆ.

**ಪರಾಮರ್ಶನ ಗ್ರಂಥಗಳು**

1. ಜಾನಪದ : ಹಾ.ಮಾ.ನಾಯಕ್,
2. ಜನಪದ ಗೀತೆಗಳು : ಸಂಪಾದಕರು: ಜೀಶಂಪ